## Peer Reviewed Journal

ISSN : 2320-0391

ವರ್ಷ-೧೦ ಅಂಕ-೩೧


# ಸೃಜನ

## ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

### ಕನ್ನಡ ವಿಭಾಗ


ಪ್ರಧಾನ ಸಂಪಾದಕರು

**ಡಾ. ಎಸ್. ಟಿ. ಮೇರವಾಡೆ**

ನಿವೃತ್ತ ಪ್ರಾಚಾರ್ಯರು, ಬಿ.ಎಲ್.ಡಿ.ಇ. ಸಂಸ್ಥೆಯ ಬಸವೇಶ್ವರ ಕಲಾ ಮತ್ತು
ವಾಣಿಜ್ಯ ಮಹಾವಿದ್ಯಾಲಯ, ಬಸವನಬಾಗೇವಾಡಿ

ಸಂಪಾದಕರು

**ಡಾ. ಆರ್. ವಿ. ಪಾಟೀಲ**

ಪ್ರಾಧ್ಯಾಪಕರು, ಕನ್ನಡ ವಿಭಾಗ, ಜೆ.ಎಸ್.ಎಸ್. ಕಾಲೇಜ್
ಧಾರವಾಡ

**ಡಾ. ಎಂ. ಎಸ್. ಮಾಗಣಗೇರಿ**

ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಸಂಗಮೇಶ್ವರ ಕಲಾ ಮತ್ತು
ವಾಣಿಜ್ಯ ಮಹಾವಿದ್ಯಾಲಯ, ಚಡಚಣ ಜಿ. ವಿಜಯಪುರ


## ಜುಲೈ-ಸಪ್ಟಂಬರ ೨೦೨೨


ವಿಳಾಸ

**ಸೌಮ್ಯಪ್ರಕಾಶನ**

'ಕಬೀರ ಕುಂಜ'

ಮಹಾಬಳೇಶ್ವರ ಕಾಲೋನಿ ದರ್ಗಾರೋಡ, ವಿಜಯಪುರ-೫೮೬ ೧೦೩

ಮೊ. ೯೪೪೮೧೮೫೨೦೫, ೯೯೦೨೪೯೫೪೯೫

Email : stmerwade1961@gmail.com

मुद्रक : **त्वरित मुद्रण आफसेट प्रिन्टर्स** कागदगेरि गल्ली गदग - 582 101

Email : chaitanyaoffset@gmail.com Mob : 9448223602, 9481523602, 8884495331



ಇಲ್ಲಿಯ ಲೇಖನಗಳ ಅಭಿಪ್ರಾಯಗಳು, ಲೇಖಕರವೇ ಹೊರತು ಪತ್ರಿಕೆಯ ಅಭಿಪ್ರಾಯಗಳಲ್ಲ-ಸಂಪಾದಕರು

# ಸಮನ್ವಯ ಕವಿ ಡಾ. ಜಿ. ಎಸ್.ಶಿವರುದ್ರಪ್ಪನವರು

• ಡಾ. ಪುಷ್ಪಾ ಬಸನಗೌಡರ

ಆಧುನಿಕ ಕನ್ನಡ ಸಾಹಿತ್ಯದ ಪ್ರಾತಿನಿಧಿಕ ಶಕ್ತಿಯಾಗಿರುವ ಡಾ. ಜಿ. ಎಸ್. ಶಿವರುದ್ರಪ್ಪನವರು ಕವಿಯಾಗಿ, ವಿಮರ್ಶಕರಾಗಿ, ಕಾವ್ಯಮೀಮಾಂಸಕರಾಗಿ, ಶ್ರೇಷ್ಠ ಪ್ರಾಧ್ಯಾಪಕರಾಗಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ರಾಷ್ಟ್ರಕವಿ ಕುವೆಂಪು ಅವರ ತರುವಾಯ ಬೌದ್ಧಿಕ ಕನ್ನಡವನ್ನು ಕಟ್ಟಿದವರಲ್ಲಿ ಅಗ್ರಗಣ್ಯರು ಶಿವರುದ್ರಪ್ಪನವರು. ಕನ್ನಡ ಸಾಹಿತ್ಯ ಲೋಕದಲ್ಲಿ ಕುವೆಂಪು ರಾಷ್ಟ್ರಕವಿಯಾದರೆ, ಬೇಂದ್ರೆ ವರಕವಿ, ಕೆ. ಎಸ್. ನರಸಿಂಹಸ್ವಾಮಿ ಪ್ರಣಯ ಕವಿ–ದಾಂಪತ್ಯಕವಿ ಎಂದು ಕರೆಯಲ್ಪಟ್ಟರೆ, ಜಿ.ಎಸ್.ಎಸ್. ಅವರನ್ನು "ಹಣತೆಯಕವಿ" ಹಾಗೂ "ಸಮನ್ವಯ ಕವಿ" ಎಂದು ಕರೆಯುತ್ತೇವೆ. ಜಿ.ಎಸ್.ಎಸ್. ಕೇವಲ ಹಣತೆಯ ಕವಿ ಅಲ್ಲ, ಹಲವು ಸಾಹಿತ್ಯ ದೀಪಗಳನ್ನು ಬೆಳಗಿಸಿದ ಸಾರ್ಥಕ ಜೀವಿ. ಸರಿಸುಮಾರು ಆರು ದಶಕಗಳ ಕಾಲ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿಮಾಡಿ ಕಾವ್ಯ, ವಿಮರ್ಶೆ, ಕಾವ್ಯಮೀಮಾಂಸೆ, ಆತ್ಮಕಥೆ, ಜೀವನಚರಿತ್ರೆ, ನಾಟಕ ಈ ಮೊದಲಾದ ಸಾಹಿತ್ಯ ದೀಪಗಳನ್ನು ಬೆಳಗಿದ ಕವಿ. "ಮೌನ"ವನ್ನೇ ತಮ್ಮ ವ್ಯಕ್ತಿತ್ವದ ಪ್ರಧಾನ ಗುಣವಾಗಿಸಿಕೊಂಡ ಜಿ.ಎಸ್.ಎಸ್. ಅವರು ಮನಸ್ಸು ಮತ್ತು ಬುದ್ಧಿಗಳನ್ನು ಯಾವಾಗಲೂ ಜಡವಾಗಲು ಬಿಡಬಾರದು. ಅವುಗಳನ್ನು ನಿರಂತರವಾಗಿ ಕ್ರಿಯಾಶೀಲಗೊಳಿಸುತ್ತಾ ಸೃಜನಶೀಲತೆಯೆಡೆಗೆ ಕೊಂಡೊಯ್ಯಬೇಕೆಂಬ ನಿಲುವು ಹೊಂದಿದ್ದರು. ಯಾವಾಗಲೂ ಘನ–ಗಾಂಭೀರ್ಯ ವ್ಯಕ್ತಿತ್ವ ಹೊಂದಿದ್ದ ಅವರು, ನಮ್ಮ ವ್ಯಕ್ತಿತ್ವ ಕೇವಲ ಪ್ರದರ್ಶನಕ್ಕೆ ಮಾತ್ರ ಸೀಮಿತವಾಗದೆ, ಇನ್ನೊಬ್ಬರ ಮೇಲೆ ಆಕ್ರಮಣಕಾರಿಯೂ ಆಗಬಾರದೆಂಬ ನಿಲುವು ಜಿ.ಎಸ್.ಎಸ್. ಅವರದಾಗಿತ್ತು, ಆಧುನಿಕ ಕನ್ನಡ ಸಾಹಿತ್ಯಕ್ಕೆ ಡಾ. ಜಿ.ಎಸ್.ಎಸ್.ರವರ ಕೊಡುಗೆಗಳನ್ನು ಐದು ಹಂತಗಳಲ್ಲಿ ನೋಡಬಹುದು, ಪ್ರಾಧ್ಯಾಪಕರಾಗಿ ಮತ್ತು ಬೆಂಗಳೂರು ವಿ.ವಿ.ದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ. ಕವಿಯಾಗಿ ಮತ್ತು ಭಾವಗೀತಕಾರರಾಗಿ, ವಿಮರ್ಶಕರಾಗಿ ಮತ್ತು ಕಾವ್ಯಮೀಮಾಂಸಕರಾಗಿ ಪ್ರವಾಸ ಸಾಹಿತಿಯಾಗಿ, ಆತ್ಮಕತೆ ಮತ್ತು ಜೀವನಚರಿತ್ರೆಕಾರರಾಗಿ.

ಪ್ರಾಧ್ಯಾಪಕರಾಗಿ ಮತ್ತು ಬೆಂಗಳೂರು ವಿ.ವಿ. ದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ನಿರ್ವಹಿಸಿದ ಸಾಧನೆ ಎಂದೆಂದಿಗೂ ಮಾದರಿಯಾಗಿದೆ. ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳು ಮಾತ್ರವಲ್ಲ, ಇಡೀ ಸಾಂಸ್ಕೃತಿಕ ವಲಯವೇ ಇವರೆಡೆ ನೋಡುವಂತಾಗಿದ್ದು ದಂತಕತೆ ಮಾತ್ರವಲ್ಲ, ಇತಿಹಾಸವೆಂದೇ ಹೇಳಬಹುದು. ಜಿ.ಎಸ್.ಎಸ್. ಅತ್ಯಂತ ಪ್ರಭಾವಶಾಲೀ ಪ್ರಾಧ್ಯಾಪಕರ ಸಾಲಿಗೆ ಸೇರುವರಲ್ಲದೇ, ವಿದ್ಯಾರ್ಥಿಗಳಲ್ಲಿ ಪ್ರಶ್ನೆಯ ಬೀಜವನ್ನು ಬಿತ್ತಿ, ಅವರಿಂದಲೇ ಸಾರ್ಥಕ ಬೆಳೆಕಂಡವರು ತಾವು ಸಾಹಿತ್ಯ ಕೃಷಿ ಮಾಡುವುದರ ಜೊತೆಗೆ ಅನೇಕ ಪ್ರತಿಭಾವಂತರನ್ನು ಕ್ರಿಯಾಶೀಲಗೊಳಿಸಿ ಅವರಲ್ಲಿ ವೈಚಾರಿಕ, ವೈಜ್ಞಾನಿಕ, ಶೈಕ್ಷಣಿಕ ಮನೋಭಾವವನ್ನು ಬಿತ್ತಿ ಬೆಳೆಸುವಲ್ಲಿ ಸಾಕಷ್ಟು ಶ್ರಮವಹಿಸಿದ್ದಾರೆ. ಅನೇಕರಿಗೆ ದಾರಿದೀಪವಾಗಿದ್ದಾರೆ. ಆದರ್ಶ, ಮಾದರಿಯ ಪ್ರಾಧ್ಯಾಪಕರೆನಿಸಿದ್ದಾರೆ. ಕುವೆಂಪು ಅವರ ಶಿಷ್ಯರಾಗಿ ತಾವು ಮಾತ್ರ ಬೆಳೆಯದೇ ತಮ್ಮ ಶಿಷ್ಯರ "ಪಡೆ"ಯನ್ನೇ ಹುಟ್ಟುಹಾಕಿದ್ದಾರೆ. ತಾವು ಪಾಠ ಮಾಡಿದ ಶಿಷ್ಯರನ್ನು ಮಾತ್ರ ಬೆಳೆಸಿಲ್ಲ, ನಾಡಿನಾದ್ಯಂತ ಹಾಗೂ ನಾಡಿನ ಹೊರಗೂ ಶಿಷ್ಯಬಳಗವನ್ನು ವಿಸ್ತರಿಸಿದ್ದು ಆಧುನಿಕ ಕನ್ನಡ

# ಸಮನ್ವಯ ಕವಿ ಡಾ. ಜಿ. ಎಸ್.ಶಿವರುದ್ರಪ್ಪನವರು

• ಡಾ. ಪುಷ್ಪಾ ಬಸನಗೌಡರ

ಆಧುನಿಕ ಕನ್ನಡ ಸಾಹಿತ್ಯದ ಪ್ರಾತಿನಿಧಿಕ ಶಕ್ತಿಯಾಗಿರುವ ಡಾ. ಜಿ. ಎಸ್. ಶಿವರುದ್ರಪ್ಪನವರು ಕವಿಯಾಗಿ, ವಿಮರ್ಶಕರಾಗಿ, ಕಾವ್ಯಮೀಮಾಂಸಕರಾಗಿ, ಶ್ರೇಷ್ಠ ಪ್ರಾಧ್ಯಾಪಕರಾಗಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ರಾಷ್ಟ್ರಕವಿ ಕುವೆಂಪು ಅವರ ತರುವಾಯ ಬೌದ್ಧಿಕ ಕನ್ನಡವನ್ನು ಕಟ್ಟಿದವರಲ್ಲಿ ಅಗ್ರಗಣ್ಯರು ಶಿವರುದ್ದಪ್ಪನವರು. ಕನ್ನಡ ಸಾಹಿತ್ಯ ಲೋಕದಲ್ಲಿ ಕುವೆಂಪು ರಾಷ್ಟ್ರಕವಿಯಾದರೆ, ಬೇಂದ್ರೆ ವರಕವಿ, ಕೆ. ಎಸ್. ನರಸಿಂಹಸ್ವಾಮಿ ಪ್ರಣಯ ಕವಿ–ದಾಂಪತ್ಯಕವಿ ಎಂದು ಕರೆಯಲ್ಪಟ್ಟರೆ, ಜಿ.ಎಸ್.ಎಸ್. ಅವರನ್ನು "ಹಣತೆಯಕವಿ" ಹಾಗೂ "ಸಮನ್ವಯ ಕವಿ" ಎಂದು ಕರೆಯುತ್ತೇವೆ. ಜಿ.ಎಸ್.ಎಸ್. ಕೇವಲ ಹಣತೆಯ ಕವಿ ಅಲ್ಲ, ಹಲವು ಸಾಹಿತ್ಯ ದೀಪಗಳನ್ನು ಬೆಳಗಿಸಿದ ಸಾರ್ಥಕ ಜೀವಿ. ಸರಿಸುಮಾರು ಆರು ದಶಕಗಳ ಕಾಲ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿಮಾಡಿ ಕಾವ್ಯ, ವಿಮರ್ಶೆ, ಕಾವ್ಯಮೀಮಾಂಸೆ, ಆತ್ಮಕಥೆ, ಜೀವನಚರಿತ್ರೆ, ನಾಟಕ ಈ ಮೊದಲಾದ ಸಾಹಿತ್ಯ ದೀಪಗಳನ್ನು ಬೆಳಗಿದ ಕವಿ. "ಮೌನ"ವನ್ನೇ ತಮ್ಮ ವ್ಯಕ್ತಿತ್ವದ ಪ್ರಧಾನ ಗುಣವಾಗಿಸಿಕೊಂಡ ಜಿ.ಎಸ್.ಎಸ್. ಅವರು ಮನಸ್ಸು ಮತ್ತು ಬುದ್ಧಿಗಳನ್ನು ಯಾವಾಗಲೂ ಜಡವಾಗಲು ಬಿಡಬಾರದು. ಅವುಗಳನ್ನು ನಿರಂತರವಾಗಿ ಕ್ರಿಯಾಶೀಲಗೊಳಿಸುತ್ತಾ ಸೃಜನಶೀಲತೆಯೆಡೆಗೆ ಕೊಂಡೊಯ್ಯಬೇಕೆಂಬ ನಿಲುವು ಹೊಂದಿದ್ದರು. ಯಾವಾಗಲೂ ಘನ–ಗಾಂಭೀರ್ಯ ವ್ಯಕ್ತಿತ್ವ ಹೊಂದಿದ್ದ ಅವರು, ನಮ್ಮ ವ್ಯಕ್ತಿತ್ವ ಕೇವಲ ಪ್ರದರ್ಶನಕ್ಕೆ ಮಾತ್ರ ಸೀಮೀತವಾಗದೆ, ಇನ್ನೊಬ್ಬರ ಮೇಲೆ ಆಕ್ರಮಣಕಾರಿಯೂ ಆಗಬಾರದೆಂಬ ನಿಲುವು ಜಿ.ಎಸ್.ಎಸ್. ಅವರದಾಗಿತ್ತು, ಆಧುನಿಕ ಕನ್ನಡ ಸಾಹಿತ್ಯಕ್ಕೆ ಡಾ. ಜಿ.ಎಸ್.ಎಸ್.ರವರ ಕೊಡುಗೆಗಳನ್ನು ಐದು ಹಂತಗಳಲ್ಲಿ ನೋಡಬಹುದು, ಪ್ರಾಧ್ಯಾಪಕರಾಗಿ ಮತ್ತು ಬೆಂಗಳೂರು ವಿ.ವಿ.ದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ. ಕವಿಯಾಗಿ ಮತ್ತು ಭಾವಗೀತಕಾರರಾಗಿ, ವಿಮರ್ಶಕರಾಗಿ ಮತ್ತು ಕಾವ್ಯಮೀಮಾಂಸಕರಾಗಿ ಪ್ರವಾಸ ಸಾಹಿತಿಯಾಗಿ, ಆತ್ಮಕತೆ ಮತ್ತು ಜೀವನಚರಿತ್ರೆಕಾರರಾಗಿ.

ಪ್ರಾಧ್ಯಾಪಕರಾಗಿ ಮತ್ತು ಬೆಂಗಳೂರು ವಿ.ವಿ. ದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ನಿರ್ವಹಿಸಿದ ಸಾಧನೆ ಎಂದೆಂದಿಗೂ ಮಾದರಿಯಾಗಿದೆ. ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳು ಮಾತ್ರವಲ್ಲ, ಇಡೀ ಸಾಂಸ್ಕೃತಿಕ ವಲಯವೇ ಇವರೆಡೆ ನೋಡುವಂತಾಗಿದ್ದು ದಂತಕತೆ ಮಾತ್ರವಲ್ಲ, ಇತಿಹಾಸವೆಂದೇ ಹೇಳಬಹುದು. ಜಿ.ಎಸ್.ಎಸ್. ಅತ್ಯಂತ ಪ್ರಭಾವಶಾಲೀ ಪ್ರಾಧ್ಯಾಪಕರ ಸಾಲಿಗೆ ಸೇರುವರಲ್ಲದೇ, ವಿದ್ಯಾರ್ಥಿಗಳಲ್ಲಿ ಪ್ರಶ್ನೆಯ ಬೀಜವನ್ನು ಬಿತ್ತಿ, ಅವರಿಂದಲೇ ಸಾರ್ಥಕ ಬೆಳೆಕಂಡವರು ತಾವು ಸಾಹಿತ್ಯ ಕೃಷಿ ಮಾಡುವುದರ ಜೊತೆಗೆ ಅನೇಕ ಪ್ರತಿಭಾವಂತರನ್ನು ಕ್ರಿಯಾಶೀಲಗೊಳಿಸಿ ಅವರಲ್ಲಿ ವೈಚಾರಿಕ, ವೈಜ್ಞಾನಿಕ, ಶೈಕ್ಷಣಿಕ ಮನೋಭಾವವನ್ನು ಬಿತ್ತಿ ಬೆಳೆಸುವಲ್ಲಿ ಸಾಕಷ್ಟು ಶ್ರಮವಹಿಸಿದ್ದಾರೆ. ಅನೇಕರಿಗೆ ದಾರಿದೀಪವಾಗಿದ್ದಾರೆ. ಆದರ್ಶ, ಮಾದರಿಯ ಪ್ರಾಧ್ಯಾಪಕರೆನಿಸಿದ್ದಾರೆ. ಕುವೆಂಪು ಅವರ ಶಿಷ್ಯರಾಗಿ ತಾವು ಮಾತ್ರ ಬೆಳೆಯದೇ ತಮ್ಮ ಶಿಷ್ಯರ "ಪಡೆ"ಯನ್ನೇ ಹುಟ್ಟುಹಾಕಿದ್ದಾರೆ. ತಾವು ಪಾಠ ಮಾಡಿದ ಶಿಷ್ಯರನ್ನು ಮಾತ್ರ ಬೆಳೆಸಿಲ್ಲ, ನಾಡಿನಾದ್ಯಂತ ಹಾಗೂ ನಾಡಿನ ಹೊರಗೂ ಶಿಷ್ಯಬಳಗವನ್ನು ವಿಸ್ತರಿಸಿದ್ದು ಆಧುನಿಕ ಕನ್ನಡ

ವಿಧಿವಿಧಾನಗಳನ್ನೂ ಕವಿಕೃತಿ ವಿಮರ್ಶೆಯ ಆನ್ವಯಿಕ ಮುಖವನ್ನೂ ಎತ್ತಿ ತೋರಿಸಿದ್ದಾರೆ.

**ಪ್ರವಾಸ ಸಾಹಿತಿಯಾಗಿ :** ಪ್ರವಾಸ ಕಥನಗಳು ಪ್ರವಾಸಿಗರ ವ್ಯಕ್ತಿತ್ವದ ಅನಾವರಣವೆಂದೇ ಹೇಳಬಹುದು. ಮಾತ್ರವಲ್ಲ ಅದು ಅವರ ಅಭಿರುಚಿಯ ಅನುರಣನವೂ ಹೌದು. ಈ ಹಿನ್ನೆಲೆಯಲ್ಲಿ ಪ್ರವಾಸಪ್ರಿಯರಾದ ಶಿವರುದ್ರಪ್ಪನವರು ರಚಿಸಿದ ಪ್ರವಾಸ ಕಥನಗಳು ಒಟ್ಟು ೪. ಮಾಸ್ಕೋದಲ್ಲಿ ೨೨ ಜನ, ಗಂಗೆಯ ಶಿಖರಗಳಲ್ಲಿ, ಅಮೇರಿಕದಲ್ಲಿ ಕನ್ನಡಿಗ, ಇಂಗ್ಲೆಂಡಿನಲ್ಲಿ ಚತುರ್ಮಾಸ, ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ-ಪ್ರವಾಸ ಕೃತಿ ಶಿವರುದ್ರಪ್ಪನವರಿಗೆ ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ ತಂದುಕೊಟ್ಟಿದೆ. ಭಾರತ ಸರ್ಕಾರದ ಪ್ರತಿನಿಧಿಯಾಗಿ ರಷ್ಯನ್ ಸರ್ಕಾರದ ಅತಿಥಿಯಾಗಿ ಕೈಗೊಂಡ ಪ್ರವಾಸಕಥನವಿದು. ಸೋವಿಯತ್‌ನ ಸಮಾಜವಾದಿ ವ್ಯವಸ್ಥೆಯನ್ನು, ಭಾರತದ ಪ್ರಜಾಪ್ರಭುತ್ವವಾದಿ ವ್ಯವಸ್ಥೆಯ ತೌಲನಿಕತೆ ಇಲ್ಲಿದೆ. ಕಾದಂಬರಿ ಮಹರ್ಷಿಯಾದ ಲಿಯೋ ಟಾಲಸ್ಟಾಯ್ ಹುಟ್ಟಿದ ತಾಟಾಕ್ಕೆ ಭೇಟಿಯಿತ್ತಾಗ ಕುವೆಂಪು ಅವರನ್ನು ಸ್ಮರಿಸಿಕೊಳ್ಳುತ್ತಾ, ಎರಡೂ ದೈತ್ಯ ಪ್ರತಿಭೆಗಳನ್ನು ಹೋಲಿಸಿ ನೋಡಿದ್ದಾರೆ. "ಅಮೇರಿಕದಲ್ಲಿ ಕನ್ನಡಿಗ" ಪ್ರವಾಸಕಥನದಲ್ಲಿ ಅಲ್ಲಿಯ ಮ್ಯೂಸಿಯಂಗಳು ಅನೇಕ ಪ್ರವಾಸಿ ತಾಣಗಳು, ವಿಶ್ವಪ್ರಸಿದ್ಧ ನಯಾಗರಾ ಜಲಪಾತದ ಪ್ರಪಾತ ಪುರಾಣಗಳನ್ನು ಹೃದ್ಯವಾದ ಗದ್ಯದೊಂದಿಗೆ ವಿವರಿಸಿದ್ದಾರೆ.

ಆತ್ಮಕತೆ-ಜೀವನ ಚರಿತ್ರಕಾರರಾಗಿ, ನಾಟಕಕಾರರಾಗಿ, "ಚತುರಂಗ"-ಇದು ಶಿವರುದ್ರಪ್ಪನವರ ಅಸಮಗ್ರ ಆತ್ಮಕತೆ. ಅಂದರೆ, ಆತ್ಮಕಥೆಯ ಕೇವಲ ಒಂದು ಭಾಗದಷ್ಟೇ ಇಲ್ಲಿ ಮೂಡಿಬಂದಿದೆ. ತಮ್ಮ ಜೀವನದ ಬೇರೆ ಬೇರೆ ಹಂತಗಳನ್ನು, ಶಿಲೆಗಳನ್ನು ಗಮನಿಸಿ ಮುಖ್ಯವಾದ ವಿವರಗಳನ್ನು ಬಳಸಿ ಬರೆದ ಕೃತಿ ಇದಾಗಿದೆ. "ಕರ್ಮಯೋಗಿ" ಎಂಬುದು ಇವರು ರಚಿಸಿದ ಜೀವನ ಚರಿತ್ರೆ. ರಾಘವಾಂಕ ಕವಿ ಬರೆದ ಶಿವಯೋಗಿ ಸಿದ್ಧರಾಮ ಕೃತಿಯನ್ನು ಆಕರವಾಗಿದ್ದುಕೊಂಡು ಬರೆದ ಜೀವನಚರಿತ್ರೆ ಇದಾಗಿದೆ. ಸಿದ್ಧರಾಮನ ವ್ಯಕ್ತಿತ್ವವನ್ನೇ ಕೇಂದ್ರವಾಗಿಸಿಕೊಂಡ ಈ ಕೃತಿ ಕಾದಂಬರಿಯಂತೆ ನಿರೂಪಿತವಾಗಿದೆ. ಶಿವರುದ್ರಪ್ಪ ಮೂಲತಃ ಕವಿ, ವಿಮರ್ಶಕರಾಗಿದ್ದರೂ, ರೇಡಿಯೋ ನಾಟಕಗಳನ್ನು ಬರೆದಿರುವುದು ಕಂಡುಬರುತ್ತದೆ. ರಾಣಿ ದುರ್ಗಾವತಿ, ಮಹಾಸಂಗಮ, ನಾದಸೇತು ಮೊದಲಾದ ರೇಡಿಯೋ ನಾಟಕಗಳು ಇವರಿಂದ ರಚನೆಯಾಗಿವೆ.

ರಾಷ್ಟ್ರಕವಿ ಪರಂಪರೆಯನ್ನು ಎತ್ತಿಹಿಡಿದ ಕವಿ ಶಿವರುದ್ರಪ್ಪನವರ ಕೊಡುಗೆಗಳಲ್ಲಿ ಹೆಸರಿಸಬೇಕಾದ ಮತ್ತೊಂದು ಅಂಶವೆಂದರೆ, ಹಂಪಿ ಕನ್ನಡ ವಿಶ್ವವಿದ್ಯಾಲಯ ಕಟ್ಟಿ ಬೆಳೆಸುವುದಕ್ಕೆ ಮೂಲ ಪ್ರೇರಣೆ ಎಂದರೆ ಜಿ.ಎಸ್.ಎಸ್. ಎನ್ನುತ್ತಾರೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ಕಂಬಾರ ಅವರು. ಹೀಗೆ ಕವಿಯಾಗಿ, ವಿಮರ್ಶಕರಾಗಿ, ಅಪರೂಪದ ಕಾವ್ಯಮೀಮಾಂಸಕರಾಗಿ, ಪ್ರಾಧ್ಯಾಪಕರಾಗಿ, ಆತ್ಮಕಥೆಗಾರರಾಗಿ, ಜೀವನದ ಚರಿತ್ರಕಾರರಾಗಿ, ಬಹುಮುಖಿ ವ್ಯಕ್ತಿತ್ವವನ್ನು ಹೊಂದಿದ ಶಿವರುದ್ರಪ್ಪನವರು ಆಧುನಿಕ ಕನ್ನಡ ಸಾಹಿತ್ಯದ ಪ್ರವರ್ತಕರೆಂದೇ ಹೇಳಬಹುದು. ಉತ್ತಮ ಸಂಘಟಕರಾಗಿ ತಮ್ಮ ಕ್ರಿಯಾಶೀಲ ಕಾರ್ಯಚಟುವಟಿಕೆಗಳಿಂದ, ಕನ್ನಡ ಸಾಹಿತ್ಯ ಲೋಕವನ್ನು ಬೆಳಗಿಸಿದ್ದು, ಕನ್ನಡದ, ಕನ್ನಡಿಗರ ಸುದೈವ. ಅವರೊಬ್ಬ ಸಂಸ್ಕೃತಿ ಚಿಂತಕರಾಗಿ, ಸಾಮಾಜಿಕ ಪ್ರಜ್ಞೆಯ ವಿಮರ್ಶಕರಾಗಿ, ಸಾರಸ್ವತ ಲೋಕದ ತಪಸ್ವಿಗಳಾಗಿದ್ದರೆಂದೇ ಹೇಳಬಹುದು.

■■

---

ಸಹಪ್ರಾಧ್ಯಾಪಕರು, ಮಹಾಂತ ಪ್ರಥಮ ದರ್ಜೆ ಮಹಾವಿದ್ಯಾಲಯ, ರಾಯಾಪೂರ, ಧಾರವಾಡ-೦೯.
ಮೊ.ನಂ. ೯೪೮೦೫೫೭೫೧೬